

## ಮತ್ತೆ ಐಶ್- ಮಣಿ ಚಿತ್ರ

ಐಶ್ವರ್ಯಾ ರೈ ಬಚ್ಚನ್ ಮಗಳು ಆರಾಧ್ಯ ಜನಿಸಿ ಎರಡು ವರ್ಷವಾಯಿತು. ಇವತ್ತು ನಾಳೆ ಐಶ್ ಬೇಬಿ ಮತ್ತೆ ಕ್ಯಾಮೆರಾ ಎದುರಿಸುತ್ತಾರೆ ಎಂಬ ಸುದ್ದಿಯ ಕಾವಂತೂ ಇದ್ದೇ ಇತ್ತು. ತಡ-ವಾದರೂ ಐಶ್ ಎರಡನೇ ಇನ್ನಿಂಗ್ಸ್ ಪ್ರಾರಂಭಿಸುವುದು ಖಚಿತ-ವಾಗಿತ್ತು. ಈಗ ಅದಕ್ಕೆ ಮುಹೂರ್ತ ಕೂಡಿಬಂದಿದೆ. ಅದೂ ಅವರ ನೆಚ್ಚಿನ ನಿರ್ದೇಶಕ ಮಣಿರತ್ನಂ ನಿರ್ದೇಶನದ ಚಿತ್ರದ ಮೂಲಕ.

ಮಣಿರತ್ನಂ ನಿರ್ದೇಶನದಲ್ಲಿ 'ಇರುವರ್', 'ಗುರು' ಮತ್ತು 'ರಾವಣ್' ಚಿತ್ರಗಳಲ್ಲಿ ನಟಿಸಿರುವ ಐಶ್, ತಮ್ಮ ಹೊಸ ಇನ್ನಿಂಗ್ಸ್ ಆರಂಭಿಸಲು ಉತ್ಸುಕರಾಗಿದ್ದಾರಂತೆ. 'ಗುರು' ಮತ್ತು 'ರಾವಣ್'ನಲ್ಲಿ ಐಶ್ ಜೊತೆ ಪತಿ ಅಭಿಷೇಕ್ ಕೂಡ ಕಾಣಿಸಿಕೊಂಡಿದ್ದರು. ಮಣಿರತ್ನಂ ಅವರ ಈ ಹೊಸ ಚಿತ್ರದಲ್ಲಿ ಅಭಿಷೇಕ್‌ಗೆ ಸ್ಥಾನವಿಲ್ಲವಂತೆ. 'ಅಭಿಷೇಕ್‌ಗೆ ಇಲ್ಲಿಯೂ ಪಾತ್ರವಿದೆ, ಆದರೆ ಅಷ್ಟೇನೂ ಪ್ರಾಮುಖ್ಯವಿಲ್ಲ' ಎನ್ನುವುದು ಇನ್ನೊಂದು ವರದಿ. ಮಣಿರತ್ನಂ ಮಹಿಳಾ ಪ್ರಧಾನ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸಿದ್ದಾರೆ. ದ್ವಿಭಾಷೆಯಲ್ಲಿ ಸಿದ್ಧವಾಗಲಿರುವ ಈ ಚಿತ್ರದಲ್ಲಿ ಮಹೇಶ್ ಬಾಬು ಮತ್ತು ನಾಗಾರ್ಜುನ ಇಬ್ಬರೂ ಪ್ರಮುಖ ಪಾತ್ರಗಳಲ್ಲಿ ನಟಿಸಲಿದ್ದಾರೆ ಎನ್ನುವ ಸುದ್ದಿಯೂ ಇದೆ.

ಚಿತ್ರೀಕರಣ ಪೂರ್ವ ತಯಾರಿಯಂತೂ ಈಗಾಗಲೆ ಆರಂಭ-ವಾಗಿದೆ. ಅಂದುಕೊಂಡಂತೆಯೇ ನಡೆದರೆ, ಈ ಚಿತ್ರದ ಹೆಚ್ಚಿನ ಭಾಗ ಹೊರದೇಶದಲ್ಲಿ ಚಿತ್ರಿತವಾಗಲಿದೆ. ಜುಲೈ ತಿಂಗಳಿನಲ್ಲಿ ಚಿತ್ರ ಸೆಟ್ಟೇರುವ ಸಾಧ್ಯತೆಯಿದೆ.



## ಹಳೆಯ ಶಿಲೆಗೆ ಹೊಸ ಘಮಲು

ಹಾಲಿವುಡ್ ಮಹಾಸಾಗರದಲ್ಲಿ ಹೊಸ ಪ್ರಯೋಗಗಳಿಗೇನೂ ಬರವಿಲ್ಲ. ಒಂದೇ ಕಥೆಯ ಎಳೆಯನ್ನೇ ಹತ್ತಾರು ರೀತಿಯಲ್ಲಿ ಹೊಸೆದು, ವಿಸ್ಮಯ ಹುಟ್ಟಿಸುವಂತೆ ಕಡೆದಿಡುವ ಕಲೆಗಾರಿಕೆ ಹಾಲಿವುಡ್ ಮಂದಿಯದ್ದು. ಅದರಲ್ಲೂ ತಂತ್ರಜ್ಞಾನ ಒಂದು ಹೆಜ್ಜೆ ಹಾಕಿದರೆ, ಅದನ್ನೇ ಆಧಾರವಾಗಿಟ್ಟು-ಕೊಂಡು ಸೃಷ್ಟಿಯಾಗುವ ಸಿನಿಮಾ ಕಲ್ಪನೆಯನ್ನು ಆ ತಂತ್ರಜ್ಞಾನವನ್ನು ಹತ್ತು ಹೆಜ್ಜೆ ಮುಂದಕ್ಕೆ ಕೊಂಡೊಯ್ದಿರುತ್ತದೆ. ಇನ್ನು ಹಳತರ ಮರುಸೃಷ್ಟಿಯಲ್ಲಿ ಒಂದು ಕೈ ಮೇಲೆಯೇ.

ಇಂಥ ಮತ್ತೊಂದು ಕುತೂಹಲಕಾರಿ ಮತ್ತು ಬಹುನಿರೀಕ್ಷಿತ ಪ್ರಯತ್ನ ಹಾಲಿವುಡ್‌ನಲ್ಲಿ ನಡೆದಿದೆ. ಬ್ರೆಜಿಲ್‌ನ ನಿರ್ದೇಶಕ ಜೋಸ್ ಪಡಿಲ್ಹಾ 1987ರಲ್ಲಿ ತೆರೆಕಂಡಿದ್ದ 'ರೋಬೊ ಕಾಪ್'ಅನ್ನು ಒಂದಷ್ಟು ಗಂಧ ತೀಡಿ ಮತ್ತೆ ತೆರೆ ಮೇಲೆ ತಂದಿದ್ದಾರೆ. 'ಎಲೈಟ್ ಸ್ಕ್ವ್ಯಾಡ್'ನಂಥ ಚಿತ್ರಗಳನ್ನು ನಿರ್ದೇಶಿಸಿ-ರುವ ಪಡಿಲ್ಹಾ ಅವರಿಗೆ ಸಾಥ್ ನೀಡಿರುವುದು ಬಾಂಡ್ ಸಿನಿಮಾಗಳಿಗೆ ಚಿತ್ರಕಥೆ ಹೆಣೆದಿರುವ ಜೋಶ್ವಾ ಜೆಟ್ಟರ್ನರ್. ಕಳೆದ ಹದಿನಾಲ್ಕು ವರ್ಷದಲ್ಲಿ ಸಿನಿಮಾ ತಂತ್ರಜ್ಞಾನ ಮತ್ತು ಪ್ರೇಕ್ಷಕನಲ್ಲಿ ಬಹಳ ಬದಲಾವಣೆಗಳಾಗಿವೆ. ಆದರೆ 'ರೋಬೊಕಾಪ್'ನ ವಸ್ತು ವೈಶಿಷ್ಟ್ಯ ಎಲ್ಲಾ ಕಾಲಕ್ಕೂ ಸಲ್ಲುವಂಥದ್ದು. ಅದು ಮತ್ತೆ ಹೊಸ ಸ್ವರೂಪದಲ್ಲಿ ತೆರೆ ಮೇಲೆ ಬಂದರೆ ಗೆಲುವು ನಿಶ್ಚಿತ ಎನ್ನುವುದು ಜೋಸ್ ಪಡಿಲ್ಹಾ ನಂಬಿಕೆ. ಹೀಗಾಗಿ ಪಾಲ್ ವರ್ಹೊವೆನ್ ನಿರ್ದೇಶಿಸಿದ್ದ ಮೂಲಚಿತ್ರವನ್ನು ಅದೇ ಹೆಸರಿನಲ್ಲಿ ಒಂದಷ್ಟು ಬದಲಾವಣೆ-ಗಳೊಂದಿಗೆ ಸಿದ್ಧಪಡಿಸಿದ್ದಾರೆ ಪಡಿಲ್ಹಾ. ಬದಲಾದ ಕಾಲಘಟ್ಟಕ್ಕೆ ಅನುಗುಣ-ವಾಗಿ ಒಂದಷ್ಟು ರೋಚಕತೆ, ಅದ್ದೂರಿತನ ಸೇರಿಸಿದ್ದಾರಂತೆ.

ಹೊಸ 'ರೋಬೊಕಾಪ್' ಸೈನ್ಸ್ ಫಿಕ್ಷನ್ ಆ್ಯಕ್ಷನ್ ಸಿನಿಮಾ. ಚಿತ್ರದ ಹೆಚ್ಚಿನ ಭಾಗ ಟೊರಾಂಟೊದಲ್ಲಿ ಚಿತ್ರೀಕರಣಗೊಂಡಿದೆ. ಅಂದ ಹಾಗೆ, ಚಿತ್ರದ ಕಥೆಯ ಕಾಲಘಟ್ಟ 2029. ಧೈರ್ಯಶಾಲಿ ಪೊಲೀಸ್ ಅಧಿಕಾರಿಯೊಬ್ಬ ಅಪಘಾತಕ್ಕೆ ಸಿಲುಕುವುದು, ಬಳಿಕ ಆತ 'ರೋಬೊಕಾಪ್' ಆಗಿ ಬದಲಾಗುವುದು ಕಥೆಯ ತಿರುಳು. ಜೋಲ್ ಕಿನ್ನಮನ್ ಪೊಲೀಸ್ ಅಧಿಕಾರಿ ಅಲೆಕ್ಸ್ ಮರ್ಫಿ ಮತ್ತು ಪರಿವರ್ತನೆ ಹೊಂದಿದ ರೋಬೊ ಪೊಲೀಸ್ ಆಗಿ ಕಾಣಿಸಿಕೊಂಡಿದ್ದಾರೆ.

■ ಅಮಿ